ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	207
ಸದಸ್ಯರ ಹೆಸರು	:	ಶ್ರೀ ಆರ್.ಬಿ.ತಿಮ್ಮಾಪೂರ (ವಿಧಾನಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ	:	04-03-2020
ಉತ್ತರಿಸುವ ಸಚಿವರು	:	ಮಾನ್ಯ ಕಂದಾಯ ಸಚಿವರು

ಪ್ರಶ್ನೆ		ಉತ್ತರ
(ಅ)	ಉತ್ತರ ಕರ್ನಾಟಕದ ಬಾಗಲಕೋಟೆ ಜಿಲ್ಲೆಯಲ್ಲಿ ಕಳೆದ ಜುಲೈ ಮತ್ತು ಆಗಸ್ಟ್-2019ರ ತಿಂಗಳಿನಲ್ಲಿ ಬಿದ್ದ ಮಹಾಮಳೆ ಹಾಗೂ ನೆರೆ ಹಾವಳಿಯಿಂದ ನದಿಯ ದಡದಲ್ಲಿರುವ ಗ್ರಾಮಗಳಿಗೆ ಸಾಕಷ್ಟು ಹಾನಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
(ಆ)	ನೆರೆ ಹಾವಳಿಯಿಂದಾಗಿ ಗ್ರಾಮೀಣ ಪ್ರದೇಶದಲ್ಲಿನ ಗುಡಿ ಕೈಗಾರಿಕೆಗಳು, ಅತೀ ಸಣ್ಣ ಕೈಗಾರಿಕೆಗಳ ಚಟುವಟಿಕೆಗಳು ಅಸ್ತವ್ಯಸ್ಥಗೊಂಡು, ಕೈಗಾರಿಕಾ ಶೆಡ್‌ಗಳಲ್ಲಿನ ಯಂತ್ರೋಪಕರಣಗಳು, ಕಚ್ಚಾ ಸಾಮಗ್ರಿಗಳು ಹಾಗೂ ಸಿದ್ದ ಉತ್ಪನ್ನಗಳು, ಅಂಗಡಿ ಮುಂಗಟ್ಟುಗಳು ಪೂರ್ಣ ಪ್ರಮಾಣದಲ್ಲಿ ಕೆಲವು ಕಡೆ ಭಾಗಶ: ಹಾನಿಗೊಳಗಾಗಿರುವ ಪ್ರಕರಣಗಳ ಸಂಖ್ಯೆ ಎಷ್ಟು; [ಪ್ರತ್ಯೇಕ ಮಾಹಿತಿ ಒದಗಿಸುವುದು]	ನೆರೆ ಹಾವಳಿಯಿಂದಾಗಿ ಗ್ರಾಮೀಣ ಪ್ರದೇಶದಲ್ಲಿನ ಗುಡಿ ಕೈಗಾರಿಕೆಗಳು, ಅತೀ ಸಣ್ಣ ಕೈಗಾರಿಕೆಗಳ ಚಟುವಟಿಕೆಗಳು ಅಸ್ತವ್ಯಸ್ಥಗೊಂಡು, ಕೈಗಾರಿಕಾ ಶೆಡ್‌ಗಳಲ್ಲಿನ ಯಂತ್ರೋಪಕರಣಗಳು, ಕಚ್ಚಾ ಸಾಮಗ್ರಿಗಳು ಹಾಗೂ ಸಿದ್ದ ಉತ್ಪನ್ನಗಳು, ಅಂಗಡಿ ಮುಂಗಟ್ಟುಗಳು ಪೂರ್ಣ ಪ್ರಮಾಣದಲ್ಲಿ ಕೆಲವು ಕಡೆ ಭಾಗಶ: ಹಾನಿಗೊಳಗಾಗಿರುವ ಪ್ರಕರಣಗಳ ಪೈಕಿ ಎಸ್.ಡಿ.ಆರ್.ಎಫ್/ಎನ್.ಡಿ.ಆರ್.ಎಫ್ ಮಾರ್ಗಸೂಚಿ ಪ್ರಕಾರ ಪರಿಹಾರಕ್ಕೆ ಅರ್ಹರಿರುವ ಬಾಗಲಕೋಟೆ ಜಿಲ್ಲೆಯಲ್ಲಿ ಒಟ್ಟು 240 ಜನ ನೇಕಾರ ಕುಟುಂಬಗಳಿಗೆ ಕೈಮಗ್ಗ ಹಾನಿಗೆ ಸಂಬಂಧಿಸಿದಂತೆ ತಲಾ ರೂ.25,000/- ದಂತೆ ಒಟ್ಟು ರೂ.60.00 ಲಕ್ಷಗಳ ಪರಿಹಾರ ಪಾವತಿಸಲಾಗಿದೆ.
(ಇ)	ಹಾನಿಗೆ ಒಳಗಾದ ನಷ್ಟದ ಅಂದಾಜು ಮೊತ್ತವೆಷ್ಟು; [ವಿವರ ಒದಗಿಸುವುದು] ಹಾನಿಗೆ ಒಳಗಾದ ಕುಟುಂಬಸ್ಥರಿಗೆ ಈವರೆಗೆ ನೀಡಿರುವ ಪರಿಹಾರದ ಮೊತ್ತವೆಷ್ಟು;	ಜಿಲ್ಲೆಯಲ್ಲಿ ಒಟ್ಟು ರೂ.2547.34 ಕೋಟಿ ಹಾನಿಯಾಗಿರುವ ಬಗ್ಗೆ ಅಂದಾಜಿಸಲಾಗಿದೆ. ಬಾಗಲಕೋಟೆ ಜಿಲ್ಲೆಯಲ್ಲಿ ಎಕ್ಸ್‌ಗ್ರೇಸಿಯಾ, ವಿಶೇಷ ಆಹಾರ ಪೊಟ್ಟಣ, ಜೀವಹಾನಿ, ಜಾನುವಾರು ಹಾನಿ, ಮನೆಹಾನಿ, ಕೈಮಗ್ಗ, ತಾತ್ಕಾಲಿಕ ಶೆಡ್, ಪರಿಹಾರ ಕೇಂದ್ರ ಹಾಗೂ ಮೂಲಭೂತ ಸೌಲಭ್ಯಕ್ಕಾಗಿ ಸೇರಿ ಒಟ್ಟು ರೂ. 28795.01 ಲಕ್ಷಗಳ ಅನುದಾನ ಖರ್ಚು ಮಾಡಲಾಗಿದೆ. ವಿವರಗಳನ್ನು ಅನುಬಂಧದಲ್ಲಿ ಒದಗಿಸಿದೆ.

(ಈ)	ಯಾವ ಮಾನದಂಡದ ಆಧಾರದ ಮೇಲೆ ಪರಿಹಾರ ಮೊತ್ತವನ್ನು ಪರಿಗಣಿಸಲಾಗುವುದು;	ಕೇಂದ್ರ ಸರ್ಕಾರದ ಎಸ್.ಡಿ.ಆರ್.ಎಫ್./ ಎನ್.ಡಿ.ಆರ್.ಎಫ್. ಮಾರ್ಗಸೂಚಿಗಳ ಪ್ರಕಾರ ಹಾಗೂ ಸರ್ಕಾರದ ವಿಶೇಷ ಪ್ಯಾಕೇಜ್ ಯೋಜನೆಯಡಿ ಪರಿಹಾರ ಪಾವತಿಸಲಾಗಿದೆ.
(ಉ)	ಪರಿಗಣಿಸದಿದ್ದಲ್ಲಿ, ಪರಿಗಣಿಸುವುದು ಯಾವಾಗ; ಈ ಕುರಿತು ಸರ್ಕಾರದ ಸ್ಪಷ್ಟ ನಿಲುವೇನು ?	ಉದ್ಭವಿಸುವುದಿಲ್ಲ.

ಕಂಇ 96 ಟಿಎನ್‌ಆರ್ 2020

(ಆರ್. ಅಶೋಕ)
ಕಂದಾಯ ಸಚಿವರು

ವಿಧಾನ ಪರಿಷತ್ತಿನ ಪ್ರಶ್ನೆ ಸಂಖ್ಯೆ: ೨೦೭ ಕ್ಕೆ ಅನುಬಂಧ

ಬಾಗಲಕೋಟೆ ಜಿಲ್ಲೆಯಲ್ಲಿ ಆಗಸ್ಟ್-2019 ರ ಮಾಹೆಯಲ್ಲಿ ಪ್ರವಾಹದಿಂದ ಉಂಟಾದ ಹಾನಿಗೆ ನೀಡಿದ ಪರಿಹಾರದ ವಿವರ

ದಿನಾಂಕ: 26-02-2020

[ಅನುಭಂದ-1]

ಅನಂ	ವಿವರ	ಜಿಲ್ಲೆಯಲ್ಲಿ ಭರಿಸಿದ ಹಾನಿಯ ವಿವರ	ನೀಡಿದ ಪರಿಹಾರ [ರೂ.ಲಕ್ಷಗಳಲ್ಲಿ]
01	ಎಕ್ಸ್‌ಗ್ರೇಸಿಯಾ	51542	5154.20
02	ವಿಶೇಷ ಆಹಾರ ಪೊಟ್ಟಣ	46389	345.28
03	ಪರಿಹಾರ ಕೇಂದ್ರ	–	73.99
04	ಜೀವಹಾನಿ	09	63.00
05	ಜಾನುವಾರ ಹಾನಿ	301	66.04
06	ಬೆಳೆಹಾನಿ	56062 [ರೈತರು] 71750 ಕ್ಷೇತ್ರ	9084.10
07	ಮನೆಹಾನಿ [ಎ-578, ಬಿ-2582, ಸಿ-8875]	12035	8526.20
08	ಕೈಮಗ್ಗ	240	60.00
09	ತಾತ್ಕಾಲಿಕ ಶೆಡ್	344	520.90
10	ಮೂಲಭೂತ ಸೌಲಭ್ಯಕ್ಕಾಗಿ	839 ಕಾಮಗಾರಿ	4901.30
		ಒಟ್ಟು	28795.01